# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1313 |
| 2 | ಸದಸ್ಯರ ಹೆಸರು | ಶ್ರೀಮತಿ ಭಾರತಿ ಶೆಟ್ಟಿ<br>(ನಾಮ ನಿರ್ದೇಶನ ಹೊಂದಿದವರು) |
| 3 | ಉತ್ತರಿಸಬೇಕಾದ ದಿನಾಂಕ | 17.12.2025 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ತಹಶೀಲ್ದಾರ ಕಛೇರಿಯಲ್ಲಿ ವಂಶವೃಕ್ಷ ಮಾಡಿಕೊಡಲು ಸದರಿ ಕುಟುಂಬದ ಎಲ್ಲಾ ಸಹೋದರ ಸಹೋದರಿಯರ ಆಧಾರ್ ಕಾರ್ಡ್ ಸಲ್ಲಿಕೆ ಕಡ್ಡಾಯ ಮಾಡಲಾಗಿದೆಯೇ: ಇದಕ್ಕೆ ಕಾರಣಗಳೇನು: | ತಹಶೀಲ್ದಾರ ಕಛೇರಿಗಳ ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ವಂಶವೃಕ್ಷ ದೃಢೀಕರಣ ಪತ್ರಗಳನ್ನು ನೀಡಲು ಕುಟುಂಬದ ಎಲ್ಲಾ ಸಹೋದರ ಸಹೋದರಿಯರ ಆಧಾರ್ ಕಾರ್ಡ್ ಸಲ್ಲಿಕೆ ಕಡ್ಡಾಯಗೊಳಿಸಿರುವುದಿಲ್ಲ. |
| (ಆ) | ಸಹೋದರ ಸಹೋದರಿಯರಲ್ಲಿ ಭಿನ್ನಾಭಿಪ್ರಾಯ ಇದ್ದಲ್ಲಿ, ಆಧಾರ ಪ್ರತಿ ಸಲ್ಲಿಸಲು ಸಾಧ್ಯವಾಗದಿದ್ದಲ್ಲಿ ಬದಲಿ ವ್ಯವಸ್ಥೆ ಕುರಿತು ಯಾವ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು; | ವಂಶವೃಕ್ಷ ದೃಢೀಕರಣ ಪತ್ರಗಳನ್ನು ಕೋರಿ ಸ್ವೀಕೃತವಾಗಿರುವ ಅರ್ಜಿಗಳಲ್ಲಿ ಕುಟುಂಬ ಸದಸ್ಯರುಗಳ ಆಧಾರ್ ಕಾರ್ಡ್ ಲಭ್ಯವಿಲ್ಲದ್ದಲ್ಲಿ, ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಲು ನಾಡಕಛೇರಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.<br><br>1. ಪಡಿತರ ಚೀಟಿ<br>2. ಪಾನ್ ಕಾರ್ಡ್<br>3. ಪಾಸ್ ಪೋರ್ಟ್<br>4. ಜನನ ಪ್ರಮಾಣ ಪತ್ರ |
| (ಇ) | ಸದರಿ ವಂಶವೃಕ್ಷಸ್ಥರ ಆಸ್ತಿಯ ಮಾರಾಟ ಸಮಸ್ಯೆಯಾಗುತ್ತಿರುವುದನ್ನು ಸರ್ಕಾರ ಯಾವ ರೀತಿ ಬಗೆಹರಿಸುತ್ತದೆ? (ವಿವರ ಒದಗಿಸುವುದು) | ವಂಶವೃಕ್ಷ ದೃಢೀಕರಣ ಪತ್ರಗಳನ್ನು ನೀಡಲು ನಾಡಕಛೇರಿ ತಂತ್ರಾಂಶದಲ್ಲಿ ಬದಲಿ ದಾಖಲೆಗಳನ್ನು ಪಡೆದುಕೊಂಡು ಪ್ರಮಾಣ ಪತ್ರವನ್ನು ವಿತರಿಸಲು ನಿರ್ದೇಶಿಸಿ ರುವುದರಿಂದ ಆಸ್ತಿಯ ಮಾರಾಟದ ಸಮಸ್ಯೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಕಂಇ 95 ಎಜೆಎಸ್ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು